ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಶುಕ್ರವಾರ, ೧೯ನೇ ಜುಲೈ, ೧೯೮೫/ಆಷಾಢ ೨೮, ೧೯೦೭

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಮಧ್ಯಾಹ್ನ ಒಂದು ಗಂಟೆಗೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು) ಪೀಠವನ್ನು ಅಲಂಕರಿಸಿದರು.

ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು,—ಈ ಕೆಳಕಂಡ ವ್ಯಕ್ತಿಗಳು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

(೧) ಮಾಜಿ ಶಾಸಕರಾದ ಶ್ರೀ ಕೆ.ಎಂ. ನಾಗಣ್ಣನವರು ದಿನಾಂಕ ೨೪ನೇ ಏಪ್ರಿಲ್ ೧೯೮೫ರಂದು ನಿಧನರಾದರು. ಇವರು ೧೯೭೨ರಿಂದ ೧೯೭೭ರ ವರೆಗೂ ಸೇವೆಯನ್ನು ಸಲ್ಲಿಸಿದ್ದರು.

(೨) ಮಾಜಿ ಶಾಸಕರಾದ ಶ್ರೀ ಎಂ, ಎನ್. ಕೃಷ್ಣಸಿಂಗ್‌ರವರು ದಿನಾಂಕ ೨೮ನೇ ಏಪ್ರಿಲ್ ೧೯೮೫ರಂದು ನಿಧನರಾದರು. ೧೯೭೨ರಿಂದ ೧೯೭೭ರ ವರೆಗೆ ಶಾಸಕರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

(೩) ಮಾಜಿ ಶಾಸಕರಾದ ಶ್ರೀ ವೈ. ಎಂ. ಚಂದ್ರಶೇಖರಯ್ಯನವರು ದಿನಾಂಕ ೧೭ನೇ ಮೇ ೧೯೮೫ರಂದು ನಿಧನರಾದರು. ಇವರು ೧೯೫೨ರಿಂದ ೧೯೫೭ರವರೆಗೂ ಶಾಸಕರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

(೪) ಮಾಜಿ ಶಾಸಕರಾದ ಶ್ರೀ ಕೆ. ಆರ್. ನಾಡಗೌಡರವರು ದಿನಾಂಕ ೧೫ನೇ ಜೂನ್ ೧೯೮೫ರಂದು ನಿಧನರಾದರು. ಇವರು ೧೯೬೮ರಿಂದ ೧೯೭೧ರ ವರೆಗೆ ಶಾಸಕರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

(೫) ಮೈಸೂರು ಪ್ರಜಾಪ್ರತಿನಿಧಿಯ ಸದಸ್ಯರಾದ ಶ್ರೀ ಹೊನಗಿ ಸುಬ್ಬಣ್ಣ ಇವರು ದಿನಾಂಕ ೧ನೇ ಜುಲೈ ೧೯೮೫ರಂದು ನಿಧನರಾದರು ಇವರು ೧೯೪೫ರಿಂದ ೧೯೪೯ರ ವರೆಗೂ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯೆಂನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ತಿಳುಹಿಸಿ ಕೊಡಲಾಗುವುದು.

(ಸಭೆಯು ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಿತು.)